ಕಾಮಗಾರಿ ಒಳಗೊಂಡಿದೆ. ಇದರಲ್ಲಿ 2 ಕಿ.ಮೀ. ಡಾಂಬರೀಕರಣ ಮಾತ್ರ ಬಾಕಿ ಇರುತ್ತದೆ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ತೋಟಗಾರಿಕಾ ಇಲಾಖೆಯ ಫಾರಂಗಳ ಅಭಿವೃದ್ಧಿ

272(542); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಯ ಫಾರಂಗಳ ಜಿಲ್ಲಾವಾರು ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣ ಪ್ರಮಾಣದ ವಿವರಗಳನ್ನು ಒದಗಿಸುವುದು;

ಆ) ಸಾರ್ವಜನಿಕ ಮತ್ತು ಖಾಸಗಿ (ಪಿಪಿಪಿ) ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಹಿಂದಿನ ಸರಕಾರದ ಯೋಜನೆಯು ಜಾರಿಗೊಳಿಸಲಾಗಿರುವ ಅಭಿವೃದ್ಧಿ ಯೋಜನೆಗಳ ರೂಪರೇಷೆಗಳ ವಿವರಗಳೇನು;

ಇ) ಸದರಿ ಫಾರಂಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ತೋಟಗಾರಿಕೆ ಚಟುವಟಿಕೆಗಳ ಕುರಿತಾದ ವಿವರಗಳೇನು; ಸದರಿ ತೋಟಗಾರಿಕೆ ಜಮೀನನ್ನು ಅನ್ಯ ಕಾರ್ಯಗಳಿಗೆ ಬಳಕೆಯಾಗದಂತೆ ಖಾಯಂ ಕಾನೂನು ನಿರ್ಬಂಧನೆಗಳನ್ನು ವಿಧಿಸುವಲ್ಲಿ ಸರ್ಕಾರದ ಕ್ರಮಗಳೇನು?

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆಯ ಫಾರಂಗಳ ಜಿಲ್ಲಾವಾರು ಸಂಖ್ಯೆ ಮತ್ತು ಅವುಗಳ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ.

ಕ್ರ ಸಂ	ಜಿಲ್ಲೆ	ಸಂಖ್ಯೆ	ವಿಸ್ತೀರ್ಣ ಎಕರೆಗಳಲ್ಲಿ
1	ಬೆಂಗಳೂರು ನಗರ	8	174.25
2	ಬೆಂಗಳೂರು ಗ್ರಾಮಾಂತರ	6	114.3
3	ರಾಮನಗರ	10	303.34
4	ಕೋಲಾರ	14	568.21
5	ಚಿಕ್ಕಬಳ್ಳಾಪುರ	20	542.17
6	ತುಮಕೂರು	20	3691.25
7	ಚಿತ್ರದುರ್ಗ	15	451.23
8	ದಾವಣಗೆರೆ	13	358.33
9	ಶಿವಮೊಗ್ಗ	12	423.3
10	ಮೈಸೂರು	24	788.23
11	ಚಾಮರಾಜನಗರ	12	472.29
12	ಮಂಡ್ಯ	30	1931.24
13	ಹಾಸನ	19	1039.02
14	ಕೊಡಗು	9	541.04
15	ದಕ್ಷಿಣ ಕನ್ನಡ	13	504.27
16	ಉಡುಪಿ	8	278.06
17	ಚಿಕ್ಕಮಗಳೂರು	15	290.20
18	ಬೆಳಗಾವಿ	26	443.17
19	ಬಿಜಾಪುರ	7	123.20
20	ಬಾಗಲಕೋಟೆ	5	21.19

21	ಉತ್ತರಕನ್ನಡ	15	366.01
22	ಧಾರವಾಡ	8	55.34
23	ಗದಗ	9	69.20
24	ಹಾವೇರಿ	16	185.21
25	ಗುಲ್ಬರ್ಗ	14	242.09
26	ಬಳ್ಳಾರಿ	19	653.00
27	ಬೀದರ್	13	531.15
28	ರಾಯಚೂರು	13	207.03
29	ಕೊಪ್ಪಳ	12	218.33
30	ಯಾದಗಿರಿ	5	138.24
	ಒಟ್ಟು	**410**	**15732.29**

ಆ) ಇಲ್ಲ.

ಇಲಾಖೆಯಿಂದ ಕೃಷಿ ತಜ್ಞರು ಮತ್ತು ಮ್ಯಾನೇಜ್‌ಮೆಂಟ್ ತಜ್ಞರ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟ ರವರ ಸೇವೆಯನ್ನು ಬಳಸಿಕೊಂಡು 2013–14ನೇ ಸಾಲಿನಿಂದ ತೋಟಗಾರಿಕೆ ಕ್ಷೇತ್ರಗಳನ್ನು ಸಂಪನ್ಮೂಲ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ಸದರಿ ಘಾರಂಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ತೋಟಗಾರಿಕೆ ಚಟುವಟಿಕೆಗಳು ಕೆಳಕಂಡಂತಿವೆ.

- ಇಲಾಖೆಯ ಎಲ್ಲಾ ಕ್ಷೇತ್ರ / ನರ್ಸರಿಗಳನ್ನು ಅಭಿವೃದ್ಧಿಪಡಿಸಿ ಪುನಶ್ಚೇತನಗೊಳಿಸುವ ಉದ್ದೇಶದಿಂದ ವಿಶೇಷ ಉದ್ದೇಶವಾಹಕವಾಗಿ (Special purpose vehicle) ಸರ್ಕಾರದ

ಆದೇಶ ಸಂ:ಕೃತೋಇ:88: ತೋಯೋಕಾ:2008, ಬೆಂಗಳೂರು ದಿನಾಂಕ:14.11.2008 ರ ಪ್ರಕಾರ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ (KSHDA) ಯನ್ನು 2008–09ನೇ ಸಾಲಿನಲ್ಲಿ ಸ್ಥಾಪಿಸಿ, ತೋಟಗಾರಿಕೆ ಇಲಾಖಾ ವ್ಯಾಪ್ತಿಯಡಿಯಲ್ಲಿರುವ ಎಲ್ಲಾ 410 ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳನ್ನು ಈ ಏಜೆನ್ಸಿಯಡಿ ತರಲಾಗಿದೆ.

- 2013–14ನೇ ಸಾಲಿನಲ್ಲಿ 5 ಕ್ಷೇತ್ರಗಳನ್ನು (ಹಾಸನ ಜಿಲ್ಲೆಯ ಸೋಮನಹಳ್ಳಿ ತೋಟಗಾರಿಕೆ ಕ್ಷೇತ್ರ, ಕೊಡಗು ಜಿಲ್ಲೆಯ ಮಾದಾಪುರ ತೋಟಗಾರಿಕೆ ಕ್ಷೇತ್ರ, ಗುಲ್ಬರ್ಗಾ ಜಿಲ್ಲೆಯ ಚಂದ್ರಂಪಳ್ಳಿ ತೋಟಗಾರಿಕೆ ಕ್ಷೇತ್ರ, ತುಮಕೂರು ಜಿಲ್ಲೆಯ ಡಾ॥ ಎಂ.ಹೆಚ್. ಮರಿಗೌಡ ತೋಟಗಾರಿಕೆ ಕ್ಷೇತ್ರ ಮತ್ತು ಉತ್ತರ ಕನ್ನಡ ಜಿಲ್ಲೆಯ ಹೊಸೂರು ತೋಟಗಾರಿಕೆ ಕ್ಷೇತ್ರ) ಸಂಪನ್ಮೂಲ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಅದೇ ರೀತಿ ಉಳಿದ ಕ್ಷೇತ್ರಗಳನ್ನು ಹಂತ ಹಂತವಾಗಿ ಕಾರ್ಯಕ್ರಮ ರೂಪಿಸಿ ಅಭಿವೃದ್ಧಿಪಡಿಸಲಾಗುವುದು.

- ತೋಟಗಾರಿಕೆ ಜಮೀನನ್ನು ಅನ್ಯ ಕಾರ್ಯಗಳಿಗೆ ಬಳಕೆಯಾಗದಂತೆ ತಡೆಗಟ್ಟುವ ಉದ್ದೇಶದಿಂದ ತೋಟಗಾರಿಕೆ ಕ್ಷೇತ್ರ/ ನರ್ಸರಿಗಳ ಸಂರಕ್ಷಣಾ ಕಾಯ್ದೆಯನ್ನು ತರಲು ಕ್ರಮತೆಗೆದುಕೊಳ್ಳಲಾಗುತ್ತಿದೆ.